ಈ ಮಾತುಕತೆಗಳು ನಡೆಯುತ್ತಿದ್ದಾಗ ದೇಶಪಾಂಡೆಯ ಮಗ್ಗಲಲ್ಲೇ ನಿಂತು ನಮ್ಮ ಮಾತುಗಳನ್ನು ಆಸ್ಥೆಯಿಂದ ಕೇಳುತ್ತಿದ್ದ ಇನ್ನೊಬ್ಬರನ್ನು ಗಮನಿಸಿದೆ. ಸುಮಾರು ಅರುವತ್ತರ ಮೇಲಿನ ಮುದುಕ. ಗಿಡ್ಡನೆಯ ತೆಳ್ಳನೆಯ ಆಳು ಧೋತರ ಉಟ್ಟು ಕೋಟು ಹಾಕಿ ರುಮಾಲು ಸುತ್ತಿದ್ದರು. ಎಲ್ಲಾ ಮಾಸಿದ ಖಾದೀ ಬಟ್ಟೆಗಳು. ಏನೂ ಮಾತಾಡದೆ ಬಾಗಿಕೊಂಡು ಆತುರದಿಂದ, ನಾನು ಮಾತಾಡುವಾಗ ನನ್ನ ಮುಖವನ್ನು, ದೇಶಪಾಂಡೆ ಮಾತಾಡುವಾಗ ಅವನ ಮುಖವನ್ನು ಮಿಕಿಮಿಕಿ ನೋಡುತ್ತ, ವಿಚಿತ್ರವಾಗಿ ನಿಂತುಕೊಂಡಿದ್ದರು. ನೋಡಲಿಕ್ಕೆ ನಿವೃತ್ತ ಕನ್ನಡ ಶಾಲೆಯ ಮಾಸ್ತರರಂತೆ ಕಾಣುತ್ತಿದ್ದರು. ದೇಶಪಾಂಡೆ ತಾನಾಗಿ ಅವರ ಪರಿಚಯ ಮಾಡಿಸಲಿಲ್ಲ. ನಾನೂ ಅವರಾರೆಂದು ಕೇಳಲಿಲ್ಲ. ಆದರೆ ಅಲ್ಲಿ ಮಾತಾಡುತ್ತ ನಿಂತಷ್ಟು ಹೊತ್ತೂ ಅವರು ತಮ್ಮ ವಿಚಿತ್ರ ನೋಟದಿಂದ ಗಮನ ಸೆಳೆಯುತ್ತಲೇ ಇದ್ದರು.

'ಏನು, ಇಷ್ಟು ದೂರ ಬಂದಿದ್ದಿ?' ಎಂದು ದೇಶಪಾಂಡೆಯನ್ನು ಕೇಳಿದೆ.

ದೇಶಪಾಂಡೆ ತನ್ನ ಕಥೆ ಹೇಳಿಕೊಂಡ. ಮೂರು ನಾಲ್ಕು ವರ್ಷವಾದರೂ ಅವನ ನೌಕರಿ ಇನ್ನೂ ಕಾಯಂ ಆಗಲೊಲ್ಲದಂತೆ. ಅದಕ್ಕಾಗಿ ಕೊಲೆಜಿಯೇಟ್ ಡೈರೆಕ್ಟರ್ ಅವರ ಆಫೀಸಿನಲ್ಲಿ ಸಂಬಂಧಿಸಿದವರನ್ನು ಭೆಟ್ಟಿಯಾಗಲು ಬಂದಿದ್ದನಂತೆ. ಒಬ್ಬಿಬ್ಬರು ಎಂ.ಎಲ್.ಎ.ಗಳ ಕಡೆಯಿಂದ ಹೇಳಿಸಿದ್ದಾನಂತೆ. ಹಣ ಕೊಡುವುದಕ್ಕೂ ತಯಾರಾಗಿದ್ದಾನಂತೆ. ಆದರೂ ಕೆಲಸ ಆಗಲೊಲ್ಲದೆಂದು ತನ್ನ ಕೆಲಸದ ಗೋಳನ್ನು ಹೇಳಿಕೊಂಡ. ಕೊನೆಗೆ, 'ಆಫೀಸಿನ್ಯಾಗ ನಿಮಗ ಯಾರರ ಗುರ್ತಿನವರು ಅದಾರೇನ್ರಿ ಸರ್? ಇದ್ದರ, ನೀವು ಒಂದು ಮಾತು ಹೇಳಿದ್ದರ ಆಗುತ್ತಿತ್ತು' ಎಂದ.

ನನಗೆ ಅಲ್ಲಿ ಯಾರ ಪರಿಚಯವೂ ಇರಲಿಲ್ಲ. ನನಗೂ ಆ ಆಫೀಸಿಗೂ ಸಂಬಂಧ ಬಂದದ್ದೇ ಇಲ್ಲ. ಅದೆಲ್ಲಿದೆಯೋ, ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಯಾರೋ– ಒಂದೂ ಗೊತ್ತಿರಲಿಲ್ಲ. ದೇಶಪಾಂಡೆಗೆ ನಿರಾಶೆಯಾಯಿತು. ನಾನು ಬೆಂಗಳೂರಿಗೆ ಬಂದಿದ್ದ ಕಾರಣವನ್ನು ಕೇಳಿದ. ನಾಟಕ ಅಕಾಡೆಮಿಯ ಮೀಟಿಂಗಿಗೆ ಬಂದಿರುವುದಾಗಿ ತಿಳಿಸಿದೆ.

'ಓಹೋ! ಹೌದಲ್ರಿ ಸರ್. ನಾಟಕ ಅಕಾಡೆಮಿಗೆ ನೀವು ಮೆಂಬರ್ ಆದದ್ದು ಪೇಪರಿನಾಗ ಬಂದಿತ್ತು. ಅಂದಂಗ ಅದರ ಅಧ್ಯಕ್ಷರು ಯಾರಿದ್ದಾರೀ?' ಎಂದ ದೇಶಪಾಂಡೆ.

ನಾನು ಅಧ್ಯಕ್ಷರ ಹೆಸರು ಹೇಳಿದೆ.

'ಮತ್ತ ಯಾರ್ಯಾರು ಇದ್ದಾರ್ರಿ ಅದರೊಳಗ?' ಅವನು ಅತ್ಯಂತ ಉತ್ಸಾಹಿತನಾಗಿ ಕೇಳಿದ.

ನಾನು ಮತ್ತೆ ಕೆಲವರ ಹೆಸರು ಹೇಳಿದೆ. ಅದರಲ್ಲಿ ಮೂರು–ನಾಲ್ಕು ಜನ ಸಿನಿಮಾ ನಿರ್ದೇಶಕರ ಹೆಸರೂ ಇದ್ದವು.

ದೇಶಪಾಂಡೆ ಇನ್ನಷ್ಟು ಉತ್ತೇಜಿತನಾದ. 'ನೋಡ್ರಿ ಸರ್! ನಿಮಗ ಇಷ್ಟೆಲ್ಲಾ ದೊಡ್ಡ ದೊಡ್ಡ ಡೈರೆಕ್ಟರ್ಸ್ ಗುರ್ತು ಅದಾರ. ನೀವು ಮನಸ್ಸು ಮಾಡಿದರ ನನಗೊಂದು ಚಾನ್ಸ್ ಕೊಡಸೂದ ಕಷ್ಟ ಅಲ್ಲ'– ಎಂದ.

ಇಷ್ಟೆಲ್ಲ ದೊಡ್ಡ–ದೊಡ್ಡ ಜನರ ಜೊತೆಗೆ ನಾನು ಅಕಾಡೆಮಿಯ ಸದಸ್ಯನಾಗಿದ್ದೇನೆಂದು ತೋರಿಸಿಕೊಳ್ಳುವ ಭರದಲ್ಲಿ ನಾನು ಈ ಗಂಡಾಂತರವನ್ನು ಮರೆತೇಬಿಟ್ಟಿದ್ದೆ. ದೇಶಪಾಂಡೆ ನನ್ನನ್ನು ಆ ದುರ್ಬಲ ಕ್ಷಣದಲ್ಲಿ ಹಿಡಿದುಬಿಟ್ಟ. ದೇಶಪಾಂಡೆ ಇಷ್ಟು ವರ್ಷಗಳ ನಂತರವೂ ಏನೇನೂ ಬದಲಾಗಿಲ್ಲ ಎನಿಸಿತು.

ನನಗೆ ಆದಷ್ಟು ಬೇಗ ಅವನಿಂದ ತಪ್ಪಿಸಿಕೊಳ್ಳಬೇಕೆನಿಸಿತ್ತು. ಮೀಟಿಂಗಿಗೆ ಹೊತ್ತು ಬೇರೆ